ಪಠಣ ಕುತೂಹಲ

ಎಂ.ಎಸ್. ಶ್ರೀರಾಮ್



# ಕೆಲಸದ ಚರಿತ್ರೆ

ಆಧುನಿಕ ಯುಗದಲ್ಲಿ ಕೆಲವೇ ಜನರ ಕೈಯಲ್ಲಿ ಶ್ರೀಮಂತಿಕೆಯೂ, ತತ್ಫಲವಾಗಿ ಅನೇಕರು ಕೆಲಸ ಕಳೆದುಕೊಂಡಿರುವುದನ್ನು ನಾವು ಕಾಣಬಹುದು. ಆಧುನಿಕತೆಯೇ ಅಸಮಾನತೆಯ ಮೂಲವಿರಬಹುದೇ ಎನ್ನುವುದನ್ನು ಯೋಚಿಸಿನೋಡಲು ಜೇಮ್ಸ್ ಸುಜ್‌ಮನ್ ಪುಸ್ತಕ ನಮ್ಮನ್ನು ಪ್ರೇರೇಪಿಸುತ್ತದೆ.

ಕೆಲಸ ಎಂದರೇನು? ಅದರ ಇತಿಹಾಸವೇನು? ಇದು ಸರಳವಾದ ಪ್ರಶ್ನೆಯೇನೂ ಅಲ್ಲ. ಆದರೆ, ನಾವು ಇಂದು ಕೆಲಸ ಎಂದು ಭಾವಿಸುವ ಚಟುವಟಿಕೆಯ ವಿಸ್ತೃತ ಹಿನ್ನೆಲೆ ಹಾಗೂ ಇತಿಹಾಸವನ್ನು ಜೇಮ್ಸ್ ಸುಜ್‌ಮನ್ ತಮ್ಮ 'ವರ್ಕ್: ಎ ಹಿಸ್ಟರಿ ಆಫ್ ಹೌ ವಿ ಸ್ಪೆಂಡ್ ಅವರ್ ಟೈಮ್' ಎನ್ನುವ ವಿದ್ವತ್ಪೂರ್ಣ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಒಂದು ರೀತಿಯಲ್ಲಿ ಯುವಾಲ್ ನೋವಾ ಹರಾರಿಯ 'ಸೇಪಿಯನ್ಸ್' ಪುಸ್ತಕದಷ್ಟೇ ವಿಸ್ತಾರ ಈ ಪುಸ್ತಕಕ್ಕೂ ಇದೆ. ನಾವು ನಮ್ಮ ಸಮಯವನ್ನು ಹೇಗೆ ಕಳೆಯುತ್ತೇವೆ. ವಿರಾಮವನ್ನು ಹೇಗೆ ಪಡೆಯುತ್ತೇವೆ. ಅದರ ವಿವಿಧ ಆಯಾಮ ಮತ್ತು ಆರ್ಥಿಕತೆಯನ್ನು ಚರ್ಚಿಸುತ್ತಾ ಈ ಪುಸ್ತಕ ಇತರ ಅನೇಕ ಪ್ರಶ್ನೆಗಳನ್ನೂ ನಮ್ಮ ಮುಂದೆ ತೆರೆದಿಡುತ್ತದೆ. ಮಾನವಶಾಸ್ತ್ರದಲ್ಲಿ ಪರಿಣತಿ ಹೊಂದಿರುವ ಸುಜ್‌ಮನ್, ಆಫ್ರಿಕಾದ ಬುರ್ಕಿನಾ ಫಾಸೋದ ಆದಿವಾಸಿಗಳ ಅಧ್ಯಯನವನ್ನೂ ಕೈಗೊಂಡಿದ್ದಾರೆ. ಅವರು ತಮ್ಮ ಜೀವನ - ಸಮಯ - ಕೆಲಸ - ವಿರಾಮ - ವಿಲಾಸಗಳನ್ನು ಹೇಗೆ ನಿಭಾಯಿಸುತ್ತಾರೆಂಬುದನ್ನೂ ದಾಖಲಿಸಿದ್ದಾರೆ.

ಕೆಲಸಕ್ಕೂ ಸಮಯಕ್ಕೂ ಅವಿನಾಭಾವ ಸಂಬಂಧವಿರುವುದನ್ನು ನಾವು ಕಾಣಬಹುದು. ಹೀಗಾಗಿಯೇ ಕೆಲಸ ಮತ್ತು ವಿರಾಮದ ನಡುವಿನ ಸಮತೋಲನದ ಮಾತನ್ನೂ ಆಡುತ್ತೇವೆ. ಒಂದು ಆನೆಯನ್ನು ಪರಿಗಣಿಸಿ. ಆನೆ ಜೀವಂತವಿರಲು ದಿನದ ಎಷ್ಟು ಸಮಯವನ್ನು ಆಹಾರ ಸೇವಿಸುವುದರಲ್ಲಿ ಕಳೆಯಬೇಕು? ಈ ಮಾತನ್ನು ಪರಿಗಣಿಸಿದಾಗ - ಜೀವಜಂತುಗಳಿಗೆ ವಿರಾಮ ಕಾಲ ಅತ್ಯಲ್ಪ ಮಟ್ಟದಲ್ಲಿ ಸಿಗುತ್ತದೆನ್ನುವುದು ನಮಗೆ ವೇದ್ಯವಾಗುತ್ತದೆ.

ಬುರ್ಕಿನಾ ಫಾಸೋ ದ ಜು-ಹೊನಾಸಿ ಬುಡಕಟ್ಟಿನವರು ವಾರಕ್ಕೆ ಕೇವಲ ಹದಿನೈದು ಗಂಟೆಗಳ ಕಾಲ ಮಾತ್ರ ತಮ್ಮ ಆಹಾರಕ್ಕಾಗಿ ಅಲೆದಾಡುತ್ತಾರಂತೆ. ಅಲೆದಾಡಿ ಸಂಗ್ರಹಿಸಿದ ಆಹಾರವನ್ನು ಪರಿಷ್ಕರಿಸಲು, ಕಟ್ಟಿಗೆ ತರಲು, ಸೂರು ನಿರ್ಮಿಸಲು ಮತ್ತು ಪರಿಕರಗಳನ್ನು ಮರಮ್ಮತ್ತು ಮಾಡಲು ವಾರಕ್ಕೆ ಇನ್ನಿಪ್ಪತ್ತು ಗಂಟೆ ವ್ಯಯಿಸುತ್ತಾರೆಂದು